ಆರ್ ಎ ನಂ. 30/2022
ಪಿ ಡಬ್ಲ್ಯು 1
ದಿನಾಂಕ 12-11-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಡಿ ಎನ್ ಪಿ ವಕೀಲರಿಂದಃ</u>

ನಾನು ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನನ್ನ ಹಿರಿಯ ಸಹೋದರಿಯರು ವಿಭಾಗ ಕೋರಿ ಓ ಎಸ್ ನಂ. 206/2010 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೆ ಎಂದರೆ ಸರಿ. ಓ ಎಸ್ ನಂ. 206/2010 ರ ದಾವೆಯಲ್ಲಿ ತೀರ್ಪು ಆದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸಹೋದರಿಯರು ರಾಜಿ ಮಾಡಿಕೊಳ್ಳುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ರಾಜಿ ಮಾಡಿಕೊಳ್ಳುವುದಾಗಿ ನನ್ನ ಸಹೋದರಿಯರು ಹೇಳಿದರು ಎಂದು ಈಗ ಸೃಷ್ಟಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ಸಹೋದರಿಯರು ಎಫ್ ಡಿ ಪಿ ಪ್ರಕರಣದ ದಾಖಲಿಸಿದ್ದರು ಎಂದರೆ ಸರಿ. ಸದರಿ ವಿಚಾರ ಸಹ ನನಗೆ ಗೊತ್ತು, ಆ ಸಂದರ್ಭದಲ್ಲೂ ಸಹ ನನ್ನ ಸಹೋದರಿಯರು ಪ್ರಕರಣ ಹಿಂಪಡೆಯವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಎಫ್ ಡಿ ಪಿ ಪ್ರಕರಣದಲ್ಲಿ ನನ್ನ ಸಹೋದರಿಯರ ಬಳಿ ಹಣ ಇಲ್ಲ ಕಾರಣ ಸರ್ವೆ ಕಾರ್ಯ ಜರುಗಿಸಲು ಶುಲ್ಕ ಕಟ್ಟಲು ಆಗದೇ ಸದರಿ ಪ್ರಕರಣ ವಜಾವಾಗಿದೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ನನ್ನ ಸಹೋದರಿಯರು ಈಗ್ಗೆ 2-3 ವರ್ಷಗಳ ಹಿಂದೆ ಮತ್ತೊಂದು ಎಫ್ ಡಿ ಪಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಅದರಲ್ಲಿ ನಾನು ವಕೀಲರನ್ನು ನೇಮಕ ಮಾಡಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಅಳತೆ ಕಾರ್ಯ ಮಾಡಲು ಸರ್ವೆಯರ್ ಬಂದಿದ್ದರು ಎಂದರೆ ಸರಿಯಲ್ಲ. ಎ ಇ ಇ ರವರು ಮನೆಯ ಅಳತೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ, ನಾನು ಯಾವುದೇ ದಾಖಲೆಗೆ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಎ ಇ ಇ ರವರು ಮನೆ ಅಳತೆ ಮಾಡಲು ಬಂದಾಗ ನನ್ನ ಹೆಂಡತಿ ಮನೆಯಲ್ಲಿದ್ದು ಅವರಿಗೆ ವಿಚಾರ ತಿಳಿದಿದೆ ಎಂದರೆ ಸರಿಯಲ್ಲ. ಭದ್ರ ಮೇಲ್ದಂಡೆ ಯೋಜನೆಗೆ ಭೂ ಸ್ವಾಧೀನವಾಗಿದ್ದು ಅದರಿಂದ ಬರುವ ಪರಿಹಾರದ ಹಣ ನನ್ನ ಸಹೋದರಿಯರಿಗೆ ಹೋಗಬಾರದೆಂಬ ಉದ್ದೇಶದಿಂದ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಆರೋಗ್ಯವಂತನಾಗಿ ಚೆನ್ನಾಗಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ವಕೀಲರು ನನಗೆ ಸರಿಯಾಗಿ ಮಾಹಿತಿ ನೀಡಿಲ್ಲ, ಆದ್ದರಿಂದ ಮೇಲ್ಮನವಿ ಸಲ್ಲಿಸಲು ವಿಳಂಬವಾಗಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಅಸಲು ದಾವೆಯಲ್ಲಿ ಆಗಿರುವ ತೀರ್ಪು ಕಾನೂನಾತ್ಮಕವಾಗಿದೆ ಎಂದರೆ ಸರಿಯಲ್ಲ. ಸದರಿ ತೀರ್ಪಿನಲ್ಲಿ ಎಲ್ಲಾರಿಗೂ ಸಮನಾಗಿ ಆದೇಶವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ನ್ಯಾಯಾಲಯಕ್ಕೆ ಹಾಜರಾಗಲು ಅವಕಾಶ ದೊರೆತಿಲ್ಲ ಎಂದು ನುಡಿಯುತ್ತಾರೆ. ಮೂಲ

ದಾವೆಯ ಆದೇಶಕ್ಕೆ ಸಂಬಂದಪಟ್ಟಂತೆ ವಕೀಲರಿಂದ ಮಾಹಿತಿ ತಿಳಿಯಲು ನೋಟೀಸ್ ಏನಾದರೂ ನೀಡಿರುತ್ತೇನಾ ಎಂದರೆ ಸಾಕ್ಷಿ ನಾನು ವಕೀಲರಿಗೆ ನೋಟೀಸು ನೀಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಕೀಲರಲ್ಲಿ 2010 ರಿಂದಲೂ ಸಹ ಮೂಲ ದಾವೆಯ ವಿಚಾರದ ಬಗ್ಗೆ ಕೇಳುತ್ತ ಬಂದಿರುತ್ತೇನೆ, ಆದರೆ ಅವರು ನನಗೆ ಮಾಹಿತಿ ನೀಡಿಲ್ಲ ಎಂದು ನುಡಿಯುತ್ತಾರೆ. ನನಗೆ ತೀರ್ಪಿನ ಬಗ್ಗೆ ಮೊದಲಿನಿಂದಲೂ ಮಾಹಿತಿ ಇದ್ದರೂ ಸಹ ನನ್ನ ಸಹೋದರಿಯರಿಗೆ ತೊಂದರೆ ಕೊಡುವ ಸಲುವಾಗಿ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 2010 ರಿಂದ ಈ ದಿನಾಂಕದವರೆಗೆ ಶಾಲೆಗೆ ಹಾಜರಾಗಿ ಮಾಸಿಕ ಸಂಬಳವನ್ನು ತಪ್ಪದೇ ಪಡೆಯುತ್ತಿದ್ದೇನೆ ಎಂದರೆ ಸರಿ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.